193

ಕರ್ನಾಟಕ ಸರ್ಕಾರ

ಸಂಖ್ಯೆ:ಗ್ರಾಅಪ 318 ಜಿಪಸ 2018

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:05-12-2018.

ಇವರಿಂದ:

ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್),
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಇವರಿಗೆ:

1. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
   ಜಿಲ್ಲಾ ಪಂಚಾಯತ್.

2. ನಿರ್ದೇಶಕರು
   ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ,
   ಮೈಸೂರು

ಮಾನ್ಯರೆ,

ವಿಷಯ: "ಸಬ್‌ಕೀ ಯೋಜನಾ ಸಬ್‌ಕಾ ವಿಕಾಸ್" ಅಡಿಯಲ್ಲಿ "ಜನ ಯೋಜನೆ ಅಭಿಯಾನ" ಆಯೋಜನೆ ಹಾಗೂ 2019-20ರ "ನಮ್ಮ ಗ್ರಾಮ ನಮ್ಮ ಯೋಜನೆ"ಯನ್ನು ಸಿದ್ಧಪಡಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 318 ಜಿಪಸ 2018, ದಿನಾಂಕ: 18-09-2018 ಮತ್ತು 11-10-2018.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಅ.ಸ ಪತ್ರ ದಿನಾಂಕ: 03-10-2018.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಸುತ್ತೋಲೆಗಳು ಹಾಗೂ ಅ.ಸ ಪತ್ರದಲ್ಲಿ "ಸಬ್‌ಕೀ ಯೋಜನಾ ಸಬ್‌ಕಾ ವಿಕಾಸ್" ಅಡಿಯಲ್ಲಿ "ಜನ ಯೋಜನೆ ಅಭಿಯಾನ ಆಯೋಜನೆ" ಮತ್ತು 2019-20ರ "ನಮ್ಮ ಗ್ರಾಮ ನಮ್ಮ ಯೋಜನೆ"ಯನ್ನು ಸಿದ್ಧಪಡಿಸಿ ಜಾರಿಗೊಳಿಸಲು ನಿರ್ದೇಶನ ನೀಡಲಾಗಿರುತ್ತದೆ. ಮುಂದುವರೆದಂತೆ, ಸದರಿ ಸುತ್ತೋಲೆಯಲ್ಲಿನ ನಿರ್ದೇಶನದ ಜೊತೆಗೆ ದಿನಾಂಕ:03-10-2018 ರಂದು ಸ್ಕ್ಯಾಟ್‌ಕಾಂ ಸಂವಾದದಲ್ಲಿ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಜಿ.ಪಿ.ಡಿ.ಪಿ(www.gpdp.nic.in) ತಂತ್ರಾಂಶ ಗ್ರಾಮ ಪಂಚಾಯತಿಗಳು ಸಾಧಿಸಿರುವ ಪ್ರಗತಿಯನ್ನು ಅಪ್‌ಲೋಡ್ ಮಾಡುವಂತೆ ನಿರ್ದೇಶನ ನೀಡಿರುತ್ತಾರೆ.

ಜನಯೋಜನೆ ಅಭಿಯಾನ ಆಯೋಜಿಸುವ ಸಂಬಂಧ ಹಾಗೂ 2019-20ರ ನಮ್ಮ ಗ್ರಾಮ ನಮ್ಮ ಯೋಜನೆಯನ್ನು ಸಿದ್ಧಪಡಿಸುವ ಸಂಬಂಧ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿಗಳು ಅಭಿಯಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿಯನ್ನು ನಿಗಧಿತ ನಮೂನೆಯಲ್ಲಿ ಆಯಾಯ ಗ್ರಾಮ ಪಂಚಾಯಿತಿಗಳ ಕಟ್ಟಡದ ಗೋಡೆಗಳ ಮೇಲೆ ನಮೂದಿಸಲು ತಿಳಿಸಿದೆ.

---2

ಸದರಿ ಗೋಡೆ ಬರಹಕ್ಕೆ ತಗಲುವ ವೆಚ್ಚವನ್ನು 14ನೇ ಹಣಕಾಸು ಆಯೋಗದಡಿ ಬಿಡುಗಡೆ ಮಾಡಿರುವ ಆಡಳಿತಾತ್ಮಕ ವೆಚ್ಚ ಅಥವಾ ಗ್ರಾಮ ಪಂಚಾಯಿತಿಗಳ ನಿಧಿ-1ರ ಅನುದಾನದಿಂದ ನಿಯಮಾನುಸಾರ ಭರಿಸುವಂತೆ ತಮ್ಮ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಸೂಕ್ತ ನಿರ್ದೇಶನ ನೀಡುವಂತೆ ತಮ್ಮನ್ನು ಕೋರಲು ನಿರ್ದೇಶಿತನಾಗಿದ್ದೇನೆ.

"ಸಬ್‌ಕೀ ಯೋಜನಾ ಸಬ್‌ಕಾ ವಿಕಾಸ್" ಅಡಿಯಲ್ಲಿ "ಜನ ಯೋಜನೆ ಅಭಿಯಾನ" ಕಾರ್ಯಕ್ರಮವನ್ನು ರಾಜ್ಯ ಸರ್ಕಾರವು ಒಂದು ಮಹತ್ವದ ಅಭಿಯಾನವನ್ನಾಗಿ ತೆಗೆದುಕೊಂಡಿರುವುದರಿಂದ ಈ ಬಗ್ಗೆ ಅತ್ಯಂತ ತುರ್ತು ಕ್ರಮ ಕೈಗೊಳ್ಳಲು ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವೈಯಕ್ತಿಕ ಗಮನ ಹರಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ತಮ್ಮನ್ನು ಕೋರಿದೆ.

ಲಗತ್ತು:ನಿಗಧಿತ ನಮೂನೆ

ತಮ್ಮ ವಿಶ್ವಾಸಿ,

(ವಿ.ವೆಂಕಟೇಶ್)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

5.12.18

ಪ್ರತಿ:

ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ

191



Panchayati Raj

ಗ್ರಾಮ ಪಂಚಾಯಿತಿ: ಎಲ್‌ಜಿಡಿ ಕೋಡ್:

ತಾಲ್ಲೂಕು ಪಂಚಾಯಿತಿ: ಜಿಲ್ಲೆ: ರಾಜ್ಯ:

ಗ್ರಾಮ ಪಂಚಾಯಿತಿಯ ಅಧ್ಯಕ್ಷರ ಹೆಸರು: ಗ್ರಾಮಗಳ ಹೆಸರು:

| ಕ್ರಮ ಸಂಖ್ಯೆ | ಯೋಜನೆ | ಚಟುವಟಿಕೆ | ನಿಧಿ/ಅನುದಾನ |
|---|---|---|---|
| | | | |
| | | | |
| | | | |
| | | | |

10 ft

20 ft